ಬರುವುದಕ್ಕಿಂತ ಮುಂಚಿಯೇ ಆ ಲಸ್ಟ್‌ಅನ್ನ ತಯಾರು ಮಾಡಿದ್ದರು. ಈಗ ನಾವು ಆ ಲಸ್ಟಿನ ಪ್ರಕಾರ ಫಾರೋ ಮಾಡುತ್ತಿದ್ದೇವೆ.

ಶ್ರೀ ಜೆ. ಎಲ್. ಕಟ್ಟಾಡಿ.—ಕೇವಲ ರೀಜನ್‌ಪ್ಯೆಸ್ ಮಾಡಿದ್ದಾರೆ ಎಂದು ಮಂತ್ರಿಗಳ ಮೇಲೆ ಅಪವಾದ ಬರುವ ರೀತಿ ಮಾನ್ಯ ಸದಸ್ಯರು ಮಾತನಾಡಿದರು. ಅಂತರ ರಾಜ್ಯ ಸೀನಿಯಾರಿಟಿ ಪಟ್ಟಿಯನ್ನು ಪ್ರೊವಿಷನಲ್ ಆಗಿ ಮಾಡಿರುವುದರ ಮೇಲೆ ಏನೇನು ತಕರಾರುಗಳು ಬಂದಿವೆಯೋ ಅವುಗಳನ್ನು ಕೂಲಂಕಷವಾಗಿ ವಿಚಾರ ಮಾಡಲಕ್ಕೆ ಎನಾದರೂ ಒಂದು ಕಮಿಟಿಯನ್ನು ಮಾಡಿದೆಯೇ, ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಅಪವಾದ ಕೊಡಬೇಕು ಎಂದರೆ ಯಾರಿಗಾದರೂ ಕೊಡುವುದಕ್ಕೆ ಬರುತ್ತದೆ. ಸ್ವಲ್ಪ ವಿಶಾಲ ದೃಷ್ಟಿಯಿಂದ ನೋಡಿದರೆ ಅಪವಾದ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಯುತ್ತದೆ. ಅಂತರ ರಾಜ್ಯ ಸೀನಿಯಾರಿಟಿ ಪಟ್ಟಿಯನ್ನು ಸರ್ಕಾರದವರು ಪ್ರೊವಿಷನಲ್ ಆಗಿ ಮಾಡಿದ್ದಾರೆ. 1964ನೇ ಜನವರಿಯಲ್ಲಿ ಸರ್ಕಾರದವರು ಒಂದು ನಿರ್ಧಾರ ತೆಗೆದುಕೊಂಡಿದ್ದಾರೆ. ಅದರ ಪ್ರಕಾರ ಯಾರದಾದರೂ ಆಕ್ಷೇಪಣೆಗಳಿವೆಯೇ ಎಂದು ಕೇಳುತ್ತಿದ್ದೇವೆ. ಆ ತರಹ ಅಬ್ಜೆಕ್ಷನ್‌ಗಳು ಬಂದ ಮೇಲೆ ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಎಸ್. ಶಿವಪ್ಪ.—ಈ ಇರಾಖೆಯಲ್ಲಿ ಪ್ರಮೋಷನ್ನುಗಳನ್ನು ಕೊಡುವ ವಿಚಾರದಲ್ಲಿ ಬಹಳ ವಾಗಿ ಅತೃಪ್ತಿ ಇದೆ ಎಂದು ಗೊತ್ತಾಗಿದೆ. ಸರ್ಕಾರದವರು ಈ ಬಗ್ಗೆ ವಿಚಾರಣೆ ನಡೆಸಿ ಎಲ್ಲಿ ಅನ್ಯಾಯವಾಗಿದೆಯೋ ಅದನ್ನು ಪರಿಹಾರ ಮಾಡತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಸ್. ಆರ್ ಕಂಠಿ.—ಬರೀ ಅತೃಪ್ತಿಯ ವಿಚಾರ ಹೇಳಿದರೆ ಆಗುವುದಿಲ್ಲ. ಯಾವ ಯಾವ ಸಂದರ್ಭಗಳಲ್ಲಿ ಅತೃಪ್ತಿಯುಂಟಾಗಿದೆ ಎಂದು ಹೇಳಿದರೆ ನಾನು ಕೇಳುವುದಕ್ಕೆ ಸಿದ್ಧನಾಗಿದ್ದೇನೆ.

Sri B. L. GOWDA.— Shall I mention the names of persons who have been affected ?

Mr. SPEAKER.—Not now. Let him pass on the names to the chair and the same will be sent to the Minister.

Sri S. M. KRISHNA.—Sir, on a point of order. When the Leader of the Opposition made a categorical assertion that certain persons have been given promotions pending the finalisation of the Inter-State seniority list, the Minister refuted it with all the force at his command. Now there is another ho'nble Member Sri B. L. Gowda who would like to quote an example wherein promotions have been given. May I know what prevents that information being given ?

Mr. SPEAKER.—It is because of lack of time during the question hour. He must remember that it is not possible to make a distinction between one member and another. If instances are to be mentioned they should be brought to my notice first.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನನ್ನ ಕೈಯಲ್ಲಿ ಅನ್ಯಾಯವಾಗಿಲ್ಲ ಎಂದು ಮಂತ್ರಿಗಳು ತಿಳಿಸಿದರು. ಒಬ್ಬ ಗೆಜೆಟೆಡ್ ಅಧಿಕಾರಿಗಳು ಇನ್ನೂ ಹೆಚ್ಚಿನ ಹುದ್ದೆಗೆ ಹೋಗತಕ್ಕ ಸಂದರ್ಭದಲ್ಲಿ ಅವರು ಆ ಹುದ್ದೆಗೆ ಏರಬಾರದೆಂದು ರಿಜೈರ್ ಆಗತಕ್ಕ ಒಬ್ಬ ಅಧಿಕಾರಿಗೆ, ವಿದ್ಯಾ ಇರಾಖೆಯಲ್ಲಿ ನಾಲ್ಕು ತಿಂಗಳ ಕಾಲ ಎಕ್ಸ್‌ಟೆನ್ಷನ್ ಕೊಟ್ಟು ಅವರನ್ನು ಮುಂದುವರಿಸಿದ್ದು ನಿಜವೇ, ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ಎಕ್ಸ್‌ಟೆನ್ಷನ್ ಕೊಡುತ್ತಾರೆ.

Construction of a Tank near Sasalapura in Sathanoor Hobli, Kanakapura Taluk.

*Q.—89. **Sri K. L. SHIVALINGE GOWDA** (Virupakshipura).—Will the Government be pleased to state:—

(a) whether it is a fact that Survey has been made some years back to cocstruct a Tank near Sasalapura, Sathanoor Hobli, Kanakapura Taluk ;

(Sri K. L. Shivalinge Gowda)

(*b*) whether it is also a fact that the Government has ordered not to construct the said tank as it would affect the supply of water under the "Bheema Anekat" and that the lands of Sasalapura Village will be submerged;

(*c*) whether it has come to their notice that the ryots of this area are alarmed due to the re-survey of the said tank:

(*d*) whether they intend to take immediate steps to stop this Survey work?

A.—Sri ALUR HANUMANTHAPPA (Deputy Minister for Minor Irrigation).—

(*a*) Yes.
(*b*) No such order was issued.
(*c*) No.
(*d*) Not necessarily.

ಶ್ರೀ ಕೆ. ಎಲ್. ಶಿವಲಿಂಗೇ ಗೌಡ.—ಸಾಸಲಾಪುರದ ಬಳಿ ಒಂದು ಕೆರೆಯನ್ನು ಕಟ್ಟಲು ಸರ್ವೆ ಕಾರ್ಯ ನಡೆದಿದೆ. ಇದಕ್ಕೆ ಒಂದು ಮೈಲಿ ಕೆಳಗಡೆ 10 ಲಕ್ಷ ರೂಪಾಯಿ ಖರ್ಚಿನಲ್ಲಿ ಭೀಮಾ ಅಣೆಕಟ್ಟನ್ನು ಕಟ್ಟುವ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಹೀಗಿರುವಾಗ ಇದಕ್ಕೆ ಒಂದು ಮೈಲಿ ಮೇಲ್ಗಡೆ ಸಾಸಲಾಪುರ ಬಳಿ ಒಂದು ಪ್ರಾಜೆಕ್ಟ್ ಗಾಗಿ ಸರ್ವೆ ನಡೆಸಲು ಉದ್ದೇಶವಾದರೂ ಏನು?

† ಶ್ರೀ ಆಲೂರು ಹನುಮಂತಪ್ಪ.—ಅಲ್ಲಿ ರೀಸರ್ವೆ ಮಾಡತಕ್ಕ ಪರಿಸ್ಥಿತಿ ಈಗ ಇಲ್ಲ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಒಂದು ವೇಳೆ ಅದನ್ನು ತಮ್ಮ ಗಮನಕ್ಕೆ ತಂದರೆ ಮುಂದಿನ ಕ್ರಮ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಸರ್ವೆ ಮಾಡಬೇಕಾದ ಅವಶ್ಯಕತೆ ಸದ್ಯದಲ್ಲಿ ಕಾಣುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಲ್ಲಿ ಸರ್ವೆ ಮಾಡುತ್ತಿದ್ದಾರೆಂದು ಸ್ಥಳೀಯ ಸದಸ್ಯರು ಹೇಳುತ್ತಾರೆ, ಮಾನ್ಯ ಮಂತ್ರಿಗಳು ಸರ್ವೆ ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಹಾಗಾದರೆ ಅಧಿಕಾರಿಗಳು ಅಲ್ಲಿಗೆ ಹ ೨ ವಸೂಲಿಗೇನಾದರೂ, ಹೋಗಿದ್ದರೇ? ಏನು ಕಾರಣದಿಂದ ಹೋಗಿದ್ದರು?

ಶ್ರೀ ಆಲೂರು ಹನುಮಂತಪ್ಪ.—ಸರ್ವೆ ಮಾಡಿದೆ, ಫೇಸಿಬರ್ ಅಲ್ಲ ಎಂದು ಕೈಬಿಟ್ಟಿದೆ.

Mr. SPEAKER.—Question hour is over.

Member's Representations.

ಶ್ರೀ ಬಿ. ಎಲ್. ಗೌಡ.—ಸಭಾಸತಿಗಳೇ, ಮೊನ್ನೆಯ ದಿನದ ಲ್ಯಾಂಡ್ ರೆವೆನ್ಯೂ ಸರ್ಚಾರ್ಜ್ ಬಿಲ್ಲನ್ನು ಈ ಸಭೆಯಲ್ಲಿ ಮಂಡಿಸಲು ಸದ್ಯಕ್ಕೆ ಇಚ್ಛಿಸುವುದಿಲ್ಲ ಎಂದು ಮಾನ್ಯ ರೆವೆನ್ಯೂ ಮಂತ್ರಿಗಳು ಹೇಳಿದರು. ಆದರೆ ಇವತ್ತು ಪತ್ರಿಕೆಗಳಲ್ಲಿ ಓದಿದ್ದರಲ್ಲಿ ಮುಂದಿನವರ್ಷದಿಂದ ಸರ್ಚಾರ್ಜ್ ಇರುವುದಿಲ್ಲ ಎಂದು ತಿಳಿದುಬಂತು. ಇಲ್ಲಿ ಮುಖ್ಯವಾದ ಪ್ರಶ್ನೆ ಏನೆಂದರೆ ಅನೇಕ ತಂದರ್ಭಗಳಲ್ಲಿ ಇಂಥ ಮುಖ್ಯವಾದ ನಿರ್ಧಾರಗಳನ್ನು ಈ ಸಭೆ ನಡೆಯುತ್ತಿರುವಾಗಲೂ ಸಭೆಯ ಪಮನಕ್ಕೆ ತರದೆ, ಪತ್ರಿಕೆಗಳಲ್ಲಿ ಪ್ರಕಟವಾಗುವುದು ಈ ಸಭೆಯ ಹಕ್ಕುಬಾಧ್ಯತೆಗಳಿಗೆ ಲೋಪ ತಂದಂತಾಗುವುದಿಲ್ಲವೇ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಅದು ಪತ್ರಿಕಾ ಪ್ರಕಟಣೆಯೇ ಅಥವಾ ಮೇಲ್‌ಮನೆಯಲ್ಲಿ ಹೇಳಿಕೆ ಕೊಟ್ಟದ್ದೊ?

ಶ್ರೀ ಬಿ. ಎಲ್. ಗೌಡ.—ಈ ಸಭೆ ನಡೆಯುತ್ತಿರುವಾಗ ಆ ವಿಚಾರವನ್ನು ಇಲ್ಲಿಯೂ ಏಕೆ ತಿಳಿಸಬಾರದಾಗಿತ್ತು?

Mr. SPEAKER.—The Chair will deal with it.